ಸಾಕ್ಷಿಯನ್ನು ದಿಃ**11.03.2025** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ಸಿ ಎಸ್ ಎಸ್ ವಕೀಲರಿಂದಃ–**

ನಾನು ಈ ದಾವೆಯಲ್ಲಿ ನನ್ನ ವಕೀಲರ ಮೂಲಕ ಪ್ರತಿವಾದ ಪತ್ರವನ್ನು ಸಲ್ಲಿಸಿದ್ದೇನೆ. ಸಾಕ್ಷಿ ಮುಂದುವರೆದು ಈ ದಾವೆ ಹಾಕಿರುವ ವಿಷಯ ಗೊತ್ತಿರಲಿಲ್ಲ. ನನ್ನ ತಾಯಿ ತೀರಿಹೋದ ನಂತರ ಗೊತ್ತಾಯಿತು. ನನ್ನ ತಾಯಿ ದಿನಾಂಕ 19.02.2020 ರಲ್ಲಿ ತೀರಿಹೋಗಿದ್ದಾರೆ. ಈ ದಾವೆ ದಾಖಲಿಸುವ ಕಾಲಕ್ಕೆ ನನ್ನ ತಾಯಿ ಇರಲಿಲ್ಲ. ನನ್ನ ತಂದೆಯ ಹೆಸರು ಜ್ಞಾನದೇವ. ನನ್ನ ತಾಯಿಯ ಹೆಸರು ಜಮುನಾ. ನನ್ನ ತಂದೆ ತಾಯಿಗೆ ನಾನು ಹಾಗೂ 1 ರಿಂದ 4 ನೇ ಪ್ರತಿವಾದಿಯರು ಮಾತ್ರ ವಾರಸುದಾರರು. ಈ ದಾವೆಯಲ್ಲಿ ನ್ಯಾಯಾಲಯದ ಸಮನ್ಸ್ ನಮಗೆ ಬಂದಿತ್ತು. ನಮ್ಮ ಪ್ರತಿವಾದ ಪತ್ರವನ್ನು ತಯಾರಿಸಲು ನಾನೇ ಮಾಹಿತಿ ಕೊಟ್ಟಿದ್ದೇನೆ. 1 ನೇ ಪ್ರತಿವಾದಿಗೆ ಈಗ 50 ವರ್ಷ ವಯಸ್ಸಾಗಿರಬಹುದು. 2 ನೇ ಪ್ರತಿವಾದಿಗೆ ಈಗ 48 ವರ್ಷ ವಯಸ್ಸಾಗಿರಬಹುದು. 1 ಮತ್ತು 2 ನೇ ಪ್ರತಿವಾದಿಯರ ಸಮನ್ಸ್ ಗಳನ್ನು ನಾನೆ ಪಡೆದುಕೊಂಡಿದ್ದೇನೆಂದರೆ ಅವರಿಬ್ಬರು ಮದುವೆಯಾಗಿ ಹೋಗಿದ್ದು ನನ್ನ ಕೈಯಲ್ಲಿಯೇ ಅವರ ಸಮನ್ಸ್ ಗಳನ್ನು ನೀಡಿದ್ದಾರೆ. ನಾನು 1 ಮತ್ತು 2 ನೇ ಪ್ರತಿವಾದಿಯರ ಸಮನ್ಸ್ ನ್ನು ಸ್ವೀಕರಿಸಿದ ಬಗ್ಗೆ ಅವರಿಬ್ಬರಿಗೆ ತಿಳಿಸಿದ್ದೇನೆ. ನನ್ನ ಮತ್ತು 1 ಮತ್ತು 2 ನೇ ಪ್ರತಿವಾದಿಯರ ಮಧ್ಯೆ ಯಾವುದೇ ವೈಶಮ್ಯ ಮತ್ತು ವಿರೋಧ ಇಲ್ಲ. 1 ಮತ್ತು 2 ನೇ ಪ್ರತಿವಾದಿಯರ ವಯಸ್ಸನ್ನು ತೋರಿಸಲು ನಾನು ಯಾವುದೇ ದಾಖಲೆ ಹಾಜರುಪಡಿಸಿಲ್ಲ. ನನ್ನ ಪ್ರತಿವಾದ ಪತ್ರದಲ್ಲಿ 1 ಮತ್ತು 2 ನೇ ಪ್ರತಿವಾದಿಯರ ವಿಳಾಸ ಸರಿಯಿಲ್ಲ ಎಂದು ಬರೆಸಿದ್ದು, ಅವರ ಸರಿಯಾದ ವಿಳಾಸವನ್ನು ಪ್ರತಿವಾದ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿ. ವಾದ ಪತ್ರದಲ್ಲಿರುವ 1 ಮತ್ತು 2 ನೇ ಪ್ರತಿವಾದಿಯರ ವಿಳಾಸ ಸರಿಯಾಗಿದೆ.

ವಾದಿಯರು ಈ ದಾವೆಯನ್ನು ಯಾವ ಆಸ್ತಿಗಳ ಮೇಲೆ ಹಾಕಿದ್ದಾರೆಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿದು ನಂತರ ತಿಳಿದುಕೊಂಡಿದ್ದೇನೆಂದು ನುಡಿಯುತ್ತಾರೆ. ವಾದಿಯರು ಈ ದಾವೆಯನ್ನು ಎಷ್ಟು ಐಟಂ ಆಸ್ತಿಗಳ ಮೇಲೆ ಹಾಕಿದ್ದಾರೆಂದು ಗೊತ್ತಿಲ್ಲ. ವಾದಿಯರು ಈ ದಾವೆಯನ್ನು ದಾವಾ ಎ ಷೆಡ್ಯೂಲ್ ನಲ್ಲಿ ಮಂಗಳೂರು ಹೆಂಚಿನ ಗೋಡೌನ ಮತ್ತು ದಾವಾ ಬಿ ಷೆಡ್ಯೂಲ್ ನಲ್ಲಿ 3 ಸೈಟ್ ಗಳ ಬಗ್ಗೆ ಹಾಕಿದ್ದಾರೆಂದರೆ ಈಗ ಗೊತ್ತಾಯಿತು. ಗೋಡೌನ ಇರುವ ಜಾಗದ ಮುನ್ಸಿಪಲ್ ಖಾತಾ ನಂಬರ್ ಎಷ್ಟು

ಎಂದರೆ ಗೊತ್ತಿಲ್ಲ. ದಾವಾ ಬಿ ಷೆಡ್ಯೂಲ್ ನಲ್ಲಿ ಕಾಣಿಸಿದ 3 ಸೈಟ್ ಗಳ ಮುನ್ಸಿಪಲ್ ಖಾತಾ ನಂಬರ್ ಗೊತ್ತಿದೆಯೇ ಎಂದರೆ ಇಲ್ಲ. ದಾವಾ ಎ ಮತ್ತು ಬಿ ಷೆಡ್ಯೂಲ್ ಸ್ವತ್ತುಗಳ ಚೆಕ್ಕುಬಂದಿ ಸರಿಯಿಲ್ಲ ಎಂದು ವಕೀಲರಿಗೆ ಮಾಹಿತಿ ಕೊಟ್ಟಿದ್ದೀರಾ ಎಂದರೆ ಗೊತ್ತಿಲ್ಲ. ನಿಮ್ಮ ಪ್ರತಿವಾದ ಪತ್ರದಲ್ಲಿ ದಾವಾ ಸ್ವತ್ತುಗಳ ನಿಜವಾದ ಚೆಕ್ಕುಬಂದಿ ಏನೆಂದು ಬರೆಸಿ ಹಾಕಿದ್ದೀರಾ ಎಂದರೆ ಗೊತ್ತಿಲ್ಲ. ನಿಮ್ಮ ಪ್ರತಿವಾದ ಪತ್ರದಲ್ಲಿ ದಾವಾ ಸ್ವತ್ತುಗಳು ವಾದಿಗಳಿಗೆ ಸೇರಿದ್ದು, ಅವರಿಗೆ ತಿಳುವಳಿಕೆ ಇರುವಂತೆ ನಾವು 12 ವರ್ಷಕ್ಕೂ ಮೇಲ್ಪಟ್ಟು ಅನುಭವಿಸಿಕೊಂಡು ಬರುತ್ತಿದ್ದೇವೆ ಎಂದು ಬರೆಸಿದ್ದೀರಾ ಎಂದರೆ ಸುಳ್ಳು ನಾವು ಬರೆಸಿಲ್ಲ. ನಿಮ್ಮ ಪ್ರತಿವಾದ ಪತ್ರದಲ್ಲಿ 35 ವರ್ಷಕ್ಕೂ ಹೆಚ್ಚು ಕಾಲದಿಂದ ದಾವಾ ಸ್ವತ್ತುಗಳ ಬಗ್ಗೆ ಕಂದಾಯ ಕಟ್ಟುತ್ತಿರುವುದಾಗಿ ಹೇಳಿದ್ದು, ಆ ಬಗ್ಗೆ ದಾಖಲೆ ಇದೆಯೇ ಎಂದರೆ ಇದೆ. ಸದರಿ ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇದೆಯೇ ಎಂದರೆ ನೋಡಿ ಹೇಳುತ್ತೇನೆ.

ದಾವಾ ಸ್ವತ್ತುಗಳು ವಾದಿಯರ ತಂದೆಯಾದ ಮುಸ್ತಾಫ್ ಖಾನ್ ಅಲಿಯಾಸ್ ಪ್ಯಾರೇಜಾನ್ ಎನ್ನುವವರು ಮುನ್ಸಿಪಾಲಿಟಿ ಇಂದ ಹರಾಜಿನಲ್ಲಿ ಖರೀದಿಸಿದ ಸ್ವತ್ತುಗಳು ಎಂದರೆ ಸಾಕ್ಷಿ ಹೌದು ಎಂದು ನುಡಿದು ನಂತರ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ಸಮನ್ಸ್ ಜಾರಿಯಾದ ದಿನದಿಂದಲೂ ನಾನು ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದೇನೆ. ವಾದಿಯರು ಈ ದಾವೆಯನ್ನು ಯಾವ ಆಧಾರದ ಮೇಲೆ ಏನು ಪರಿಹಾರ ಕೋರಿ ಸಲ್ಲಿಸಿದ್ದಾರೆಂದು ತಿಳಿದುಕೊಂಡಿದ್ದೀರಾ ಎಂದರೆ ಗೊತ್ತಿಲ್ಲ. ಈ ದಾವೆಯಲ್ಲಿ ವಾದಿಯರು ಅವರ ಪರವಾಗಿ ಏನೆಲ್ಲಾ ದಾಖಲೆಗಳನ್ನು ಹಾಜರುಪಡಿಸಿದ್ದಾರೆಂದು ತಿಳಿದುಕೊಂಡಿದ್ದೀರಾ ಎಂದರೆ ಗೊತ್ತಿಲ್ಲ. ದಾವಾ ಸ್ವತ್ತುಗಳ ಖಾತೆ ಮುನ್ಸಿಪಾಲಿಟಿಯಲ್ಲಿ ಯಾರ ಹೆಸರಿನಲ್ಲಿದೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಗೊತ್ತಿಲ್ಲ. ದಾವಾ ಸ್ವತ್ತುಗಳ ಬಗ್ಗೆ ದಿನಾಂಕ 28.07.2010 ರಂದು ಹುಣಸೂರು ಮುನ್ಸಿಪಾಲಿಟಿ ರವರು ವಾದಿಯರ ಹೆಸರಿಗೆ ಶುದ್ಧ ಕ್ರಯ ಪತ್ರವನ್ನು ಬರೆದುಕೊಟ್ಟಿದ್ದಾರೆಂದರೆ ಗೊತ್ತಿಲ್ಲ. ಸದರಿ ಕ್ರಯ ಪತ್ರವನ್ನು ಹರಾಜು ಆಗಿ ಹಣ ಕಟ್ಟಿದ ದಿನವೇ ವಾದಿಯರಿಗೆ ಸ್ವಾಧೀನ ಬಿಟ್ಟುಕೊಡಲಾಗಿದೆ ಎಂದು ಬರೆಯಲಾಗಿದೆ ಎಂದರೆ ಸುಳ್ಳು. ಕ್ರಯ ಪತ್ರದ ಆಧಾರದ ಮೇಲೆ ವಾದಿಯರ ಜಂಟಿ ಹೆಸರಿಗೆ ಮುನ್ಸಿಪಾಲಿಟಿಯಲ್ಲಿ ಖಾತೆಯಾಗಿದೆ ಎಂದರೆ ಗೊತ್ತಿಲ್ಲ.

ವಾದಿಯರಾಗಲೀ ಅವರ ತಂದೆಯಾಗಲೀ ಪ್ರತಿವಾದಿಯರಾದ ನಮಗಾಗಲೀ ಅಥವಾ ನಮ್ಮ ತಂದೆ ತಾಯಿಯರಿಗಾಗಲೀ ದಾವಾ ಸ್ವತ್ತುಗಳ ಬಗ್ಗೆ ಯಾವುದೇ ಹಕ್ಕು ಬದಲಾವಣೆ ಪತ್ರ ಬರೆದುಕೊಟ್ಟಿಲ್ಲ ಎಂದರೆ ಬರೆದುಕೊಟ್ಟಿದ್ದಾರೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಗೊತ್ತಿಲ್ಲ. ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಹಾಜರುಪಡಿಸಿರಬಹುದು ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.